ಜನರಲ್ಲಿ ಇರುವ ಮೂಢನಂಬಿಕೆಯನ್ನು ಪರಿಹರಿಸುವ ಕೆಲಸವನ್ನೂ ಮಾಡುತ್ತಾರೆ.

ಕಾಲೇಜು ಕಲಿಕೆಯ ನಂತರ ಹೈದರಾಬಾದ್ ಮೂಲದ ಸ್ವಯಂ ಸೇವಾ ಸಂಸ್ಥೆಯಲ್ಲಿ ಕವಿತಾ ಉದ್ಯೋಗಕ್ಕೆ ಸೇರಿಕೊಂಡಿದ್ದರು. ಸಂಸ್ಥೆ ಮುಚ್ಚಿದ ನಂತರ, ತಮ್ಮ ಸ್ನೇಹಿತರೊಂದಿಗೆ 'ಸಹಯೋಗ್' ಎನ್ನುವ ಸಂಸ್ಥೆ ಆರಂಭಿಸಿದರು. ಹೆಣ್ಣುಮಕ್ಕಳನ್ನು ಸ್ವಾವಲಂಬಿಗಳನ್ನಾಗಿ ರೂಪಿಸುವ ಚಟುವಟಿಕೆಗಳಲ್ಲಿ ಈ ಬಳಗ ತೊಡಗಿಕೊಂಡಿದೆ. ಈಗಂತೂ ಹೈದರಾಬಾದ್ ಕರ್ನಾಟಕ ಭಾಗದ ಹೆಣ್ಣುಮಕ್ಕಳಿಗೆ ಕವಿತಾ ಅಕ್ಕನಾಗಿಬಿಟ್ಟಿದ್ದಾರೆ. ಮನೆಜಗಳಗಳ ಬಿಡಿಸುವುದರ ಜೊತೆಗೆ, ಕೌಟುಂಬಿಕ ದೌರ್ಜನ್ಯಕ್ಕೊಳಗಾದ ಹೆಣ್ಣುಮಕ್ಕಳಿಗೆ ಕಾನೂನಿನ ನೆರವು ಒದಗಿಸುವ ಕೆಲಸವನ್ನೂ ಮಾಡುತ್ತಿದ್ದಾರೆ.

ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಜಿಲ್ಲೆಯ ಒಂದೂಮುಕ್ಕಾಲು ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳಿಗೆ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಕೆಲಸ ಮಾಡಲು ಅಗತ್ಯವಾದ ಕೌಶಲಗಳ ತರಬೇತಿ ನೀಡಿದ್ದಾರೆ. ಈ ಹೆಣ್ಣುಮಕ್ಕಳು ಗ್ರಾಮೀಣ ಭಾಗಗಳಲ್ಲಿ ಅತ್ಯುತ್ತಮ ನಾಯಕಿಯರಾಗಿ ಹೊರಹೊಮ್ಮುವಂತೆ ಮಾಡಿದ್ದಾರೆ. ಅತಿ ಕಡಿಮೆ ಸಂಪನ್ಮೂಲದಲ್ಲಿ ಕವಿತಾ ಅವರು ಮಾಡಿರುವ ಸಾಧನೆಯನ್ನು ಗಮನಿಸಿರುವ ಕೇಂದ್ರ ಸಾಮಾಜಿಕ ನ್ಯಾಯ ಸಚಿವಾಲಯ ಇವರು ನಡೆಸುವ ತರಬೇತಿಗಳಿಗೆ ನಯಿ ರೋಶ್ನಿ ಯೋಜನೆಯ ಅಡಿಯಲ್ಲಿ ಸಹಾಯ ಮಾಡುತ್ತಿದೆ.

ಮೇಣದಬತ್ತಿ ಹಿಡಿದುಕೊಂಡು ನಗರಗಳಲ್ಲಿನ ಪ್ರತಿಭಟನೆಯಷ್ಟು ತಮ್ಮ ಹೋರಾಟ ಸರಳವಾದುದಲ್ಲ ಹಾಗೂ ಈ ಹೋರಾಟ ನಿರಂತರವಾದುದೆನ್ನುವ ಅರಿವು ಕವಿತಾ ಅವರದು. ನಿತ್ಯವೆಂಬಂತೆ ಗ್ರಾಮೀಣ ಹೆಣ್ಣುಮಕ್ಕಳ ಸಮಸ್ಯೆಗಳಿಗಾಗಿ ಪೊಲೀಸ್ ಸ್ಟೇಷನ್‌ನಿಂದ ವಿವಿಧ ಸರ್ಕಾರಿ ಕಚೇರಿಗಳಿಗೆ ಎಡತಾಕುವ ಕೆಲಸ ಮಾಡುವ ಕವಿತಾ ಘೋಷಣೆಗಳಿಲ್ಲದೆ ಬದಲಾವಣೆಗಳಿಗೆ ಕಾರಣರಾಗುತ್ತಿದ್ದಾರೆ. ಅವಿವಾಹಿತರಾಗಿರುವ ಅವರ ಮಟ್ಟಿಗೆ ಇಡೀ ಸಮಾಜವೇ ಅವರ ಕುಟುಂಬ. ಅವರಿಗೆ ಎಲ್ಲೆಲ್ಲೂ ಸೋದರ ಸೋದರಿಯರೇ.

## ಡಾ. ಪ್ರೀತಿ ಪೈ ಶಾನಭಾಗ್

ಪ್ರೀತಿ ಎನ್ನುವ ಹೆಸರಿನಲ್ಲಿಯೇ ಮನಸ್ಸುಗಳನ್ನು ಬೆಸೆಯುವ ಶಕ್ತಿಯಿದೆ. 'ಮಾನಸ ಟ್ರಸ್ಟ್'ನಡಿಯಲ್ಲಿ ಡಾ. ಪ್ರೀತಿ ಪೈ ಶಾನುಭಾಗ್ ಮಾಡುತ್ತಿರುವ ಕೆಲಸವೂ ಅದೇ – ಮನಸ್ಸುಗಳನ್ನು ತಿಳಿಗೊಳಿಸುವುದು, ಪ್ರೀತಿ ಹಂಚುವುದು.

ಶಿವಮೊಗ್ಗವನ್ನು ಕೇಂದ್ರವನ್ನಾಗಿಸಿಕೊಂಡು ಡಾ. ಅಶೋಕ್ ಪೈ ರಾಜ್ಯದ ಅತ್ಯುತ್ತಮ ಮನಃಶಾಸ್ತ್ರಜ್ಞರಲ್ಲೊಬ್ಬರಾಗಿ ಪ್ರಸಿದ್ಧರಾಗಿದ್ದವರು. ಅಪ್ಪನ ಹೆಜ್ಜೆಗುರುತುಗಳನ್ನು ವಿಸ್ತರಿಸುತ್ತಿರು ಪ್ರೀತಿ, ತಮ್ಮ ಬದ್ಧತೆ–ಜ್ಞಾನವನ್ನು ಜನಮುಖಿಯಾಗಿಸಲು ಹೊಸ ದಾರಿಗಳನ್ನು ಹುಡುಕಿಕೊಂಡಿದ್ದಾರೆ. ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರೌಢ ಬರಹಗಳು ಪ್ರಕಟಗೊಂಡಿವೆ ಎನ್ನುವುದು ಮನಃಶಾಸ್ತ್ರದಲ್ಲಿ ಅವರು ಸಾಧಿಸಿರುವ ಪ್ರಬುದ್ಧತೆಗೆ ಉದಾಹರಣೆ.

ಅಶೋಕ್ ಪೈ ಅವರು ರೂಪಿಸಿದ್ದ 'ಮಾನಸ ಆಸ್ಪತ್ರೆ'ಯಲ್ಲಿ ಚಿಕ್ಕಂದಿನಿಂದಲೂ ಓಡಾಡಿಕೊಂಡು





## ಶಬರಿ ಗಾಣಿಗ

ಚಿತ್ರಬಿಡಿಸುತ್ತ ಬಿಡಿಸುತ್ತ ಬಿಡಿಸುತ್ತ ತಮ್ಮದೇ ಆದ ಮಾದರಿಯನ್ನು ಕಂಡುಕೊಂಡ ವಿಶಿಷ್ಟ ಕಲಾವಿದೆ ಶಬರಿ ಗಾಣಿಗ. ವೇದಿಕೆಯ ಮೇಲಿನ ಬೃಹತ್ ಕ್ಯಾನ್‌ವಾಸ್‌ನಲ್ಲಿ ಏಳೆಂಟು ನಿಮಿಷಗಳಲ್ಲಿ ಚಕಚಕನೆ ಚಿತ್ರಬಿಡಿಸುತ್ತಿರಬೇಕಾದರೆ, ಕ್ಯಾನ್ವಾಸ್ ಮೇಲಿನ ಗೆರೆಗಳು ಸಭಿಕರಿಗೆ ಕಾಣುವುದೇ ಇಲ್ಲ. ಆದರೆ ಮಾಯಕದ ಗೆರೆಗಳನ್ನು ಎಳೆಯುವ ಕಾಯಕ ಮುಗಿದ ಬಳಿಕ ಶಬರಿ ಕ್ಯಾನ್‌ವಾಸ್ ಮೇಲೆ ಬೆಳ್ಳಿ ಬಣ್ಣದ ಹುಡಿಯನ್ನು ಎರಚುತ್ತಾರೆ. ತಕ್ಷಣವೇ ಬೆಳ್ಳಿಯ ಚಿತ್ರವೊಂದು ಅಲ್ಲಿ ಮೈದಳೆದು ಬೆರಗುಗೊಳಿಸುವುದು.

ಈ ಕಲೆ ನಿಮಗೆ ಹೇಗೆ ಒಲಿಯಿತು ಎಂದರೆ ಶಬರಿ ಹೇಳುವುದು ಗೊತ್ತಿಲ್ಲ. 'ಚಿತ್ರಗಳನ್ನು ಬರೆಯುತ್ತ ಹೀಗೊಮ್ಮೆ ಹೊಳೆಯಿತಷ್ಟೆ. ಚಿಕ್ಕ ಕ್ಯಾನ್ವಾಸ್‌ನಲ್ಲಿ ನಾನು ಇಂತಹ ಗ್ಲೋ ಆರ್ಟ್ ಮಾಡುತ್ತಿದ್ದೆ. ಈ ದೊಡ್ಡ ಕ್ಯಾನ್ವಾಸ್‌ನಲ್ಲಿಯೂ ಚಿತ್ರಗಳನ್ನು ಬಿಡಿಸುತ್ತೇನೆ' ಎನ್ನುತ್ತಾರೆ.

ಮಂಗಳೂರಿನ ನಿವಾಸಿ ಶಬರಿ ಗಾಣಿಗ ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಕಲಾವಿದೆ. ಅತೀವೇಗದಲ್ಲಿ ಚಿತ್ರವನ್ನು ಬಿಡಿಸುವ ಭಾರತದ ಮೊತ್ತದ ಮೊದಲ ಕಲಾವಿದೆ.

ಎಲ್‌ಕೆಜಿ ಹಂತದಲ್ಲಿದ್ದಾಗಲೇ ಚಿತ್ರ ರಚನೆಗಾಗಿ ಬಹುಮಾನಗಳನ್ನು ಪಡೆಯುತ್ತಿದ್ದ ಶಬರಿ ತಮ್ಮ ಸಾಧನೆಯ ಹಾದಿಯಲ್ಲಿ ಹಿಂತಿರುಗಿ ನೋಡಿದವರಲ್ಲ. ಅಪ್ಪ ಯೋಗೇಶ್ ಕುಮಾರ್ ಮತ್ತು ಅಮ್ಮ ಶಶಿಕಲಾ ಶಬರಿಯ ಸಾಧನೆಯ ಹಿಂದಿರುವ ಶಕ್ತಿ. ಯೋಗೇಶ್ ಶರ್ಮ ಬಳ್ಳಪದವು ಅವರ ಬಳಿ ಶಬರಿ ಸಂಗೀತ ಕೂಡ ಕಲಿತಿದ್ದಾರೆ.

ಅಜ್ಜಿ ಚಂದ್ರಾವತಿ ಒಳ್ಳೆಯ ಹಾಡುಗಾರ್ತಿ, ಅಮ್ಮನ ಅಪ್ಪ ಅಜ್ಜ ಕೂಡ ಉತ್ತಮ ಕಲಾವಿದರು. ಹಾಗಾಗಿ ನನಗೆ ಹಾಡು ಮತ್ತು ಚಿತ್ರಕಲೆ ಒಲಿದಿರಬಹುದು ಎನ್ನುವ ಶಬರಿ, 2019ರಲ್ಲಿ ತಮ್ಮ ಹಾಡುಗಾರಿಕೆಯ ಆಲ್ಬಂ ಹೊರತರುವ ಉತ್ಸಾಹದಲ್ಲಿದ್ದಾರೆ. 2019ರಲ್ಲೇ ಕತಾರ್–ಕುವೈತ್‌ಗೆ ಹೋಗಿ ಪ್ರದರ್ಶನ ನೀಡುವ ಯೋಜನೆಗಳು ಸಿದ್ಧವಾಗಿವೆ.

ಎಂಸಿಎ ಓದಿರುವ ಶಬರಿ ರಂಗೋಲಿ, ಕರಕುಶಲ ಕಲೆಗಳಲ್ಲಿ ನಿರಂತರ ತೊಡಗಿಸಿಕೊಂಡಿರುವವರು. ತುಳು ಸಿನಿಮಾಗಳಲ್ಲಿ ನಟಿಸಿ ಅಭಿನಯದಲ್ಲೂ ಸೈ ಅನ್ನಿಸಿಕೊಂಡಿದ್ದಾರೆ. ಸಿನಿಮಾಗಳಿಗೆ ಹಿನ್ನೆಲೆ ಸಂಗೀತಗಾರ್ತಿಯಾಗಿ, ಧ್ವನಿ ಕಲಾವಿದೆಯಾಗಿ ಸಕ್ರಿಯವಾಗಿರುವ ಅವರು, ಪ್ರಸ್ತುತ ಕಾರ್ಪೊರೆಟ್ ಕಮ್ಯುನಿಕೇಶನ್ ಮ್ಯಾನೇಜರ್ ಆಗಿ ಇನರ್ಟೆಕ್ ಅಕಾಡೆಮಿಯಲ್ಲಿ ಕೆಲಸ ಮಾಡುತ್ತಿದ್ದಾರೆ.